ಅಧ್ಯಕ್ಷರು : ನಾನು ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದೇನಲ್ಲ?

ಶ್ರೀ ರೇವು ನಾಯಕ್ ಬೆಳಮಗಿ : ನನಗೆ ಇದು ಉದ್ದೇಶಪೂರ್ವಕವಾಗಿ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ನಾನು ಕೊಡಿಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಎಂ. ಉದಾಸಿ : ಇದು 2002–03ನೇ ಇಸವಿಯ ಬೆಳೆ ಪರಿಹಾರದ ಬಗ್ಗೆ ಅವರು ಕೇಳುತ್ತಾ ಇರುವಾಗ, ಇನ್ನು 2003–04ರದ್ದು ಹೇಗೆ?

ಅಧ್ಯಕ್ಷರು : ಸಂಬಂಧಪಟ್ಟ ಆ ಪ್ರಶ್ನೆ ಬಂದಾಗ ತಾವು ಉಪಪ್ರಶ್ನೆಯನ್ನು ಕೇಳಬಹುದು. ಇನ್ನೂ ಪ್ರಶ್ನೆಗಳೇ ಮುಗಿದಿಲ್ಲ. ದಯಮಾಡಿ ಸಹಕರಿಸಿ. ಆ ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ.

ಶ್ರೀ ಸಿ.ಎಂ. ಉದಾಸಿ : ನಿಶ್ಚಿತ ದಿನಾಂಕವನ್ನಾದರೂ ಗೊತ್ತುಪಡಿಸಿ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಐದಾರು ದಿವಸ ಅಂತ ಹೇಳಿಕೊಮಡು ಹೋಗಿ ಅದು ಬರದೇ ಹೋಗಿಬಿಟ್ಟರೆ ರೈತರಿಗೆ ಅನ್ಯಾಯವಾಗುತ್ತದೆ.

ಅಧ್ಯಕ್ಷರು : ಮುಂದಿನ ಬುಧವಾರ ಕೊಡಿಸುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ರೇವು ನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೆ, ಸತತವಾಗಿ ಮೂರು ವರ್ಷಗಳಿಂದ ಬರಗಾಲ ಇದೆ. ಆದರೆ ಹತ್ತು ಪೈಸೆ ಕೂಡ ಇನ್‌ಶ್ಯೂರೆನ್ಸ್ ಹಣ ನನ್ನ ಕ್ಷೇತ್ರಕ್ಕೆ ಬಂದಿಲ್ಲ. ನಾನು ಇದನ್ನು ನೊಂದು ಹೇಳಬೇಕಾಗುತ್ತದೆ. ಗುಲ್ಬರ್ಗಾ ಜಿಲ್ಲೆಯ ಅಳಂದಾ ತಾಲ್ಲೂಕಿಗೆ ಬಂದಿಲ್ಲ. ಬೇರೆ ಕಡೆ ಗುರುಮಿಟ್ಕಲ್, ಜೀವರ್ಗಿಯಲ್ಲಿ ಸಾಕಷ್ಟು ಹಣ ಕೊಟ್ಟಿದ್ದಾರೆ. ಇದು ಬಹಳ ತಾರತಮ್ಯವಾಗಿದೆ. ನಾನು ನೊಂದು ಹೇಳುತ್ತೇನೆ, ಅವರು ಉದ್ದೇಶಪೂರ್ವಕವಾಗಿ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು : ಮಾನ್ಯ ರೇವುನಾಯಕ್‌ರವರೇ, ನಾನು ಉತ್ತರ ಕೊಡಿಸುತ್ತೇನೆ. ಅದು ನನ್ನ ಜವಾಬ್ದಾರಿ ಇದೆ. ದಯಮಾಡಿ ತಾವು ಸಹಕರಿಸಬೇಕು. ಈಗ ಮುಂದಿನ ಪ್ರಶ್ನೆ ಮಾನ್ಯ ಡಿ.ಎನ್. ಜೀವರಾಜ್ ಅವರದ್ದು.

ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಪಶು ಆಸ್ಪತ್ರೆಯಲ್ಲಿ ಸಿಬ್ಬಂದಿ ತುಂಬುವುದು

27 (40) : ಶ್ರೀ ಜೀವರಾಜ್ ಡಿ.ಎಸ್. (ಶೃಂಗೇರಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಮತ್ತು ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಇರುವ ವಿವಿಧ ದರ್ಜೆಯ ಪಶು ಆಸ್ಪತ್ರೆಗಳು, ಮಂಜೂರಾದ ಸಿಬ್ಬಂದಿ ಹಾಗೂ ಹಾಲಿ ಖಾಲಿ ಇರುವ ಹುದ್ದೆಗಳು ಎಷ್ಟು (ಆಸ್ಪತ್ರೆವಾರು ಅಂಕಿ ಅಂಶಗಳ ವಿವರ ನೀಡುವುದು);

ಆ) ಶೃಂಗೇರಿ ತಾಲ್ಲೂಕಿನಲ್ಲಿ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಕೆರೆಕಟ್ಟೆಯ ಪಶು ಆಸ್ಪತ್ರೆಯಲ್ಲಿ ಸಿಬ್ಬಂದಿ ಇಲ್ಲದಿಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರದವರು ಕಾಲಮಿತಿಯೊಳಗೆ ಸದರಿ ಹುದ್ದೆಗಳನ್ನು ತುಂಬಲು ಕ್ರಮ ಕೂಗೊಳ್ಳುವರೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 04 ಪಶು ಆಸ್ಪತ್ರೆಗಳಿವೆ. ವಿವರ ಈ ಕೆಳಕಂಡಂತಿದೆ.

	ಶೃಂಗೇರಿ	ಕೊಪ್ಪ	ಎನ್.ಆರ್. ಪುರ್	ಒಟ್ಟು
ಪಶು ಆಸ್ಪತ್ರೆ	1	1	2	4
ಮಂಜೂರಾದ ಹುದ್ದೆಗಳು	6	4	12	22
ಭರ್ತಿಯಾದ ಹುದ್ದೆಗಳು	3	3	7	13
ಖಾಲಿ ಹುದ್ದೆಗಳು	3	1	5	9

ವ್ಯಂದವಾರು ಮಂಜೂರಾದ, ಭರ್ತಿ ಮಾಡಿದ ಹಾಗೂ ಖಾಲಿ ಹುದ್ದೆಗಳ ವಿವರ ಅನುಬಂಧದಲ್ಲಿ ನೀಡಿದೆ.

ಆ) ಬಂದಿದೆ.

ಇ) ಖಾಲಿ ಹುದ್ದೆಗಳನ್ನು ತುಂಬಲು ಪ್ರಯತ್ನಿಸಲಾಗುವುದು.

ಅನುಬಂಧ-1

ಪಶು ಆಸ್ಪತ್ರೆ ಶೃಂಗೇರಿ, ಕೊಪ್ಪ, ಮತ್ತು ಎನ್.ಆರ್. ಪುರ ಹುದ್ದೆಗಳ ವಿವರ

ಹುದ್ದೆಯ ಹೆಸರು	ಶೃಂಗೇರಿ			ಕೊಪ್ಪ			ಎನ್.ಆರ್. ಪುರ			ಒಟ್ಟು		
	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
ಸಹಾಯಕ ನಿರ್ದೇಶಕರು	1	1	–	1	1	–	2	2	–	4	4	–
ಪಶುವೈದ್ಯಾಧಿಕಾರಿ	1	–	1	1	1	–	1	–	1	3	1	2
ಪಶುವೈದ್ಯಕೀಯ ಮೇಲ್ವಿಚಾರಕರು	1	–	1	–	–	–	1	–	1	2	–	2
ಪಶುವೈದ್ಯಕೀಯ ಪರೀಕ್ಷಕರು	–	–	–	–	–	–	2	1	1	2	1	1
ಪಶುವೈದ್ಯಕೀಯ ಸಹಾಯಕರು	1	1	–	1	–	1	1	1	–	3	2	1
ದ್ವಿತೀಯ ದರ್ಜೆ ಸಹಾಯಕರು	–	–	–	–	–	–	1	1	–	1	1	–
ಡಿ ಗ್ರೂಪ್	2	1	1	1	1	–	4	2	2	7	4	3
ಒಟ್ಟು	6	3	3	4	3	1	12	7	5	22	13	9

ಶ್ರೀ ಡಿ.ಎನ್. ದೇವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಉತ್ತರದಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ನಾನು ಕೇಳಿದರೆ ಪಶು ವೈದ್ಯಾಧಿಕಾರಿಗಳು, ಪಶು ವೈದ್ಯಕೀಯ ಮೇಲ್ವಿಚಾರಕರು, ಪಶು ವೈದ್ಯಕೀಯ ಪರೀಕ್ಷಕರು–ಇವರದ್ದು ಏಳು ಹುದ್ದೆಗಳು ಇದ್ದರೆ, ಅದರಲ್ಲಿ ಎರಡು ಜನ ಮಾತ್ರ ಇದ್ದಾರೆ. ಐದು ಹುದ್ದೆಗಳು ಖಾಲಿ ಇವೆ. ಡಾಕ್ಟರ್‌ಗಳೇ ಇಲ್ಲದೇ ಇರುವಂಥ ಆಸ್ಪತ್ರೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದರೆ ಅದನ್ನು ಯಾವರೀತಿ ತುಂಬುವುದಕ್ಕೆ ಆಗುತ್ತದೆ? ಕರೆಕಟ್ಟೆ ಎನ್ನುವಂಥಾದ್ದು ರಾಷ್ಟ್ರೀಯ ಉದ್ಯಾವನದೊಳಗೆ ಬರುತ್ತದೆ. ಅಲ್ಲಿ ನೆಕ್ನಲ್ಸ್ ಹಾವಳಿ ಇದೆ ಎನ್ನುವಂಥ ಚರ್ಚೆ ನಡೆಯುತ್ತಿದೆ. ನಕ್ಸಲ್ಸ್ ಹಾವಳಿ ಈ ರಾಜ್ಯಕ್ಕೆ ಒಂದು ಮಾರಕವಾದಂಥ ಅಂಶವಾಗಿದೆ. ಇಂತಹ ಜಾಗದಲ್ಲಿ ಇರುವಂತಹ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲದೇ ಹೋದರೆ ಹೇಗೆ? ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆದರೆ ಆಸ್ಪತ್ರೆಗಳಲ್ಲಿ ಡಾಕ್ಟರೇ ಇಲ್ಲ, ಲಸಿಕೆ ಇಲ್ಲ ಎಂದರೆ, ನನಗೆ ಅನ್ನಿಸುವಂಥಾದ್ದು ಏನೆಂದರೆ ಇದು ದೇವರು ಇಲ್ಲದೇ ಇರುವ ಗುಡಿಯನ್ನು ಕಟ್ಟಿ ಇಟ್ಟಂತೆ ಆಗಿದೆ. ಅಲ್ಲಿ ಪ್ರಸಾದವೂ ಇಲ್ಲ, ತೀರ್ಥವೂ ಇಲ್ಲ ಔಷಧಿಯೂ ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರು ನೇರವಾಗಿ ಪ್ರಶ್ನೆ ಕೇಳಿ. ಸಮಯ ಮುಗಿದುಹೋಗುತ್ತಿದೆ.

ಶ್ರೀ ಡಿ.ಎನ್. ದೇವರಾಜ್ : ಜತೆಗೆ ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ಕಾಲಮಿತಿಯೊಳಗೆ ತುಂಬಬಹುದೇ ಎಂದು ಕೇಳಿದರೆ, ನನಗೆ ಆಶ್ಚರ್ಯ ಆಗುತ್ತದೆ. ಪ್ರಯತ್ನಿಸಲಾಗದು ಅಂತ ಹೇಳಿದರೆ ಇನ್ನು ಯಾರ ಹತ್ತಿರ ಕೇಳಬೇಕು? ಇದಕ್ಕೊಂದು ಕಾಲಮಿತಿಯನ್ನು ಹೇಳಬೇಕಲ್ಲವೆ? ನನ್ನ ಕ್ಷೇತ್ರದೊಳಗೆ ಜನರಿಗೆ ನಾನು ಯಾವರೀತಿ ಉತ್ತರ ಕೊಡಬೇಕು? ಇದು ರೈತರಿಗೆ, ಗ್ರಾಮಸ್ಥರಿಗೆ ಅನುಕೂಲವಾಗುವಂತಹ ವಿಷಯ ಇದೆ. ರೈತರಿಗೆ ಉಪಯೋಗವಾಗುವಂಥ ಒಂದೇ ಒಂದು ವಿಷಯ ಇದು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು ನಿಜ. ಬಹಳ ಕಡೆಗೆ ಡಾಕ್ಟರ್‌ಗಳು, ಇನ್‌ಸ್ಪೆಕ್ಟರ್ ಇಂತಹ ಹುದ್ದೆಗಳು ಖಾಲಿ ಇವೆ. ಈಗಾಗಲೇ 250 ವೆಟರ್ನರಿ ಆಫೀಸರ್ಸ್‌ನ್ನು ಅಪಾಯಿಂಟ್ ಮಾಡುತ್ತಿದ್ದೇವೆ. ಇದೆಲ್ಲಾ ಕಂಪ್ಲೀಟ್ ಆಗುವುದಕ್ಕೆ ಎರಡು ತಿಂಗಳು ಆಗುತ್ತದೆ. ಇನ್ನು ಎರಡು ತಿಂಗಳು ಒಳಗೆ ಏನು ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆಯೋ ಅದರಲ್ಲಿ ಐವತ್ತು ಪರ್ಸೆಂಟ್ ಅಂತೂ ಎಲ್ಲಾ ಪೋಸ್ಟ್‌ಗಳನ್ನು ತುಂಬಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಎಲ್ಲ ಕಡೆ ಹುದ್ದೆಗಳು ಖಾಲಿ ಇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಆದ್ದರಿಂದ ಅವರು ಹೇಳಿದರಲ್ಲಾ, ದೇವರು ಇಲ್ಲದ ಗುಡಿ ಅಂತ. ಅದು ನಿಜ. ಆದಕಾರಣ ನೀವು ಎಲ್ಲವನ್ನೂ ಕೂಡ ಪರಿಗಣಿಸಿ ಭರವಸೆಯನ್ನು ಕೊಡಿ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತಿದ್ದೇನೆ. ಬಹಳ ಕಡೆ ವೆಟರ್ನರಿ ಆಫೀಸರ್ಸ್ 652 ಪೋಸ್ಟ್‌ಗಳು ಖಾಲಿ ಇವೆ. ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಹುದ್ದೆಗಳು ಒಂದು ಸಾವಿರ ಇವೆ. 152 ಜನ ಕಾಂಟ್ರಾಕ್ಟ್ ಬೇಸಿಸ್ ಮೇಲೆ ವೆಟರ್ನರಿ ಆಫೀಸರ್ಸ್ ಕೆಲಸ ಮಾಡುತ್ತಿದ್ದಾರೆ. 311 ಇನ್‌ಸ್ಪೆಕ್ಟರ್ಸ್ ಇದ್ದಾರೆ. ಇವೆಲ್ಲವನ್ನೂ ರೆಗ್ಯುಲರೈಸ್ ಮಾಡಬೇಕೆಂಬ ಪ್ರಸ್ತಾವನೆಯನ್ನು ನಾವು ಡಿ.ಪಿ.ಎ.ಆರ್.ಗೆ. ಕಳುಹಿಸಿದ್ದೇವೆ. ಡಿ.ಪಿ.ಎ.ಆರ್.

ಅಧಿಕಾರಿಗಳು ಮತ್ತು ನಮ್ಮ ಇಲಾಖೆಯವರೂ ಕೂಡಿ ಚರ್ಚೆ ಮಾಡಿದ್ದಾರೆ. ಕೊನೆಯದಾಗಿ ಫೈನಾನ್ಸ್ ಸ್ಟೇಜ್ ಇದೆ. ಅದು ಆದಮೇಲೆ, ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿ, ಮಾಡುತ್ತೇವೆ. ಹೊಸದಾಗಿ 250 ಜನ ಡಾಕ್ಟರುಗಳ ಬಗ್ಗೆ ಈಗಾಗಲೇ ಅಂಡರ್ ಪ್ರೋಸಸ್ ಇದೆ. ನಾವು ಕಾಲ್‌ಫರ್ ಮಾಡಿದ್ದೇವೆ. ಎರಡು ತಿಂಗಳೊಳಗಾಗಿ ಇವೆಲ್ಲಾ ಕಂಪ್ಲೀಟ್ ಆಗುತ್ತದೆ. ಆದಮೇಲೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ನಾವು ಪೋಸ್ಟಿಂಗ್ ಕೊಡುತ್ತೇವೆ.

ಶ್ರೀ ಡಿ.ಎನ್. ಜೀವರಾಜ್ : ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಕೆರೆಕಟ್ಟೆ ಊರಿನ ಪ್ರದೇಶದಲ್ಲಿ ಗಿರಿಜನರು ಬಹಳ ಹಿಂದುಳಿದವರು, ಇವರು ವಾಸ ಮಾಡುವಂಥ ಪ್ರದೇಶ. ನಕ್ಸಲ್ಸ್ ಚಟುವಟಿಕೆ ಇದೆಯೆಂದು ಗುರುತಿಸಲ್ಪಟ್ಟಿದೆಯೆಂದು ಅಂದುಕೊಂಡಿದ್ದೇನೆ. ನಾನು ನಿನ್ನೆ ನಕ್ಸಲ್ಸ್ ಚಟುವಟಿಕೆ ಬಗ್ಗೆ ಪ್ರಶ್ನೆ ಕೊಟ್ಟಿದ್ದೇನೆ, ನನಗೆ ಅದರ ಬಗ್ಗೆ ಉತ್ತರ ಕೂಡ ಬಂದಿಲ್ಲ. ದಯಮಾಡಿ, ಕೆರೆಕಟ್ಟೆಗೆ ಮೊದಲು ನೀವು ಆದ್ಯತೆ ಮೇಲೆ ಹಾಕಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಕೆರೆಕಟ್ಟೆ ಎಂಬುದೊಂದು ಊರು.

ಶ್ರೀ ಮಿರಾಜುದ್ದೀನ್ ಪಟೇಲ್ : ಬೇರೆ ಕಡೆ ಏನಾದರೂ ಇದ್ದಲ್ಲಿ, ಆ ಕಡೆ ವರ್ಗಾವಣೆ ಮಾಡುತ್ತೇವೆ.

ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕಡಿತದ ಭೀತಿ

28 (263) : ಶ್ರೀ ನಾರಾಯಣ ಸ್ವಾಮಿ.ಎ (ಆನೇಕಲ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡುತ್ತಿರುವ ಆರ್ಥಿಕ ಅನುದಾನವನ್ನು ಹಂತ ಹಂತವಾಗಿ ಕಡಿತ ಮಾಡಲು ಸರ್ಕಾರ ಉದ್ದೇಶಿಸಿದೆಯೇ;

ಆ) ಈ ಉದ್ದೇಶಕ್ಕೆ ಕಾರಣಗಳೇನು? ಹಾಗೂ ಎಷ್ಟು ಪ್ರಮಾಣದ ಅನುದಾನವನ್ನು ಕಡಿತ ಗೊಳಿಸಲಾಗುವುದು;

ಇ) ಇದು ಯಾವಾಗಿನಿಂದ ಜಾರಿಗೆ ಬರಲಿದೆ ಮತ್ತು ಇದು ಎಸ್.ಸಿ. ಮತ್ತು ಎಸ್.ಟಿ. ಆಡಳಿತ ಮಂಡಳಿಯ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುವುದೇ;

ಈ) ವೇತನಾನುದಾನ ಕಡಿತದಿಂದ ಉಂಟಾಗುವ ಪರಿಣಾಮಗಳನ್ನು ಸರ್ಕಾರ ಗಮನ ಹರಿಸುವುದೇ–

ಉ) ಇದರಿಂದ ರಾಜ್ಯದ ಎಷ್ಟು ಕಾಲೇಜುಗಳ ಎಷ್ಟು ಸಿಬ್ಬಂದಿ ಧಕ್ಕೆಯಾಗಲಿದೆ; (ವಿವರಗಳನ್ನು ನೀಡುವುದು)?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):

ಅ) ಈ ಬಗ್ಗೆ ಇನ್ನೂ ಅಧಿಕೃತವಾಗಿ ತೀರ್ಮಾನ ಆಗಿರುವುದಿಲ್ಲವಾದರೂ 2004–05ನೇ ಸಾಲಿನಲ್ಲಿ ಉನ್ನತ ಶಿಕ್ಷಣದಡಿಯ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅದರಲ್ಲೂ ನಗರ ಸಭಾ ಪ್ರದೇಶಗಳಲ್ಲಿರುವ 96 ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ನೀಡುವ ಅನುದಾನವನ್ನು ವಾರ್ಷಿಕ ವೇತನಾನುದಾನದಲ್ಲಿ ಅಂದಾಜು ಶೇಕಡಾ 15ರಷ್ಟು ಕಡಿತಗೊಳಿಸಿದೆ;

ಆ) 1. ರಾಜ್ಯದ ಆರ್ಥಿಕ ಪರಿಸ್ಥಿತಿ;

2. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವುದು.

ಇದು ಪರಿಶೀಲನೆಯಲ್ಲಿದೆ.